ಈ ನಾಟಕದ ಟಿಕೆಟ್ ಖರೀದಿಸಲು ಪ್ರೇಕ್ಷಕರು ಪುರಭವನದವರೆಗೆ ಸರದಿ ನಿಲ್ಲುತ್ತಿದ್ದರಂತೆ.

ಉದಯಾಚಲ ಪ್ರಾಂತ್ಯದ ಮುಖ್ಯಮಂತ್ರಿಯಾಗಿದ್ದ ಶ್ರೀಕೃಷ್ಣದ್ವೈಪಾಯನ ಕೌಶಲ್ ಅವರನ್ನು ಕುತಂತ್ರದಿಂದ ಮುಖ್ಯಮಂತ್ರಿ ಗದ್ದುಗೆಯಿಂದ ಕೆಳಗಿಳಿಸಲಾಗುತ್ತದೆ. ಮತ್ತೊಬ್ಬ ಮುಖ್ಯಮಂತ್ರಿ ನೇಮಕವಾಗುವ ತನಕ ಸರ್ಕಾರದ ಉಸ್ತುವಾರಿ ಮುಖ್ಯಮಂತ್ರಿಯಾಗುವ ಅವಕಾಶ ಪಡೆಯುವ ಕೌಶಲ್, ರಾಜಕಾರಣದ ಚದುರಂಗದಾಟವಾಡಿ ತಮ್ಮ ಪದವಿ ಹೇಗೆ ಉಳಿಸಿಕೊಳ್ಳುತ್ತಾರೆ ಎಂಬುದೇ 'ಮುಖ್ಯಮಂತ್ರಿ' ನಾಟಕದ ಸಾರಾಂಶ.

ಆಕಸ್ಮಿಕ ಎಂಬಂತೆ ಈ ನಾಟಕ ಮಾಡಿದ ಐದು ವರ್ಷಗಳಲ್ಲೇ (1985) ನಿಜ ಜೀವನದಲ್ಲಿ 'ಮುಖ್ಯಮಂತ್ರಿ' ಚಂದ್ರು ರಾಜಕಾರಣಿಯಾದರು. ಎಂಎಲ್‌ಸಿಯೂ ಆದರು. ಆದರೆ, ಎಷ್ಟೇ ಬ್ಯುಸಿ ಇದ್ದರೂ 'ಕಲಾ ಗಂಗೋತ್ರಿ' ಜತೆಗಿನ ನಂಟು ಬಿಡಲಿಲ್ಲ. 80ರಿಂದ ಇಂದಿನವರೆಗೆ ಒಂದು ವರ್ಷವೂ ಈ ನಾಟಕದ ಪ್ರದರ್ಶನವನ್ನು ತಪ್ಪಿಸಲಿಲ್ಲ. 1985ರಿಂದ ಶುರುವಾದ ರಾಜಕಾರಣಿಯ ಜೀವನ ಇಂದಿಗೂ ಅವರನ್ನು ಬಿಟ್ಟಿಲ್ಲ. ಅವರೀಗ 'ಆಮ್ ಆದ್ಮಿ'!

'ಒಬ್ಬನೇ ವ್ಯಕ್ತಿ ನಾಲ್ಕೈದು ಕ್ಷೇತ್ರಗಳಲ್ಲಿ ಸಕ್ರಿಯನಾಗಿದ್ದುಕೊಂಡು ಒಂದೇ ತಂಡ ಹಾಗೂ ಒಂದೇ ಪಾತ್ರವನ್ನು ನಿರಂತರ 43 ವರ್ಷಗಳ ಕಾಲ ಅಭಿನಯಿಸುವುದು ನನ್ನ ಮಟ್ಟಿಗೆ ದೊಡ್ಡ ಸಾಧನೆ' ಎನ್ನುತ್ತಾರೆ 'ಮುಖ್ಯಮಂತ್ರಿ' ಚಂದ್ರು. 'ಸಾಮಾನ್ಯವಾಗಿ ವೇದಿಕೆ ಸಿಕ್ಕುತ್ತಿದ್ದಂತೆಯೇ ಕೆಳಗಿನ ಮೆಟ್ಟಿಲನ್ನು ಬಿಟ್ಟುಬಿಡುತ್ತಾರೆ. ಆದರೆ, ನಾನು ಯಾವುದನ್ನೂ ಬಿಟ್ಟಿಲ್ಲ' ಎನ್ನುವ ಚಂದ್ರು ಅವರು, ರಂಗಭೂಮಿ, ಸಿನಿಮಾ, ಕಿರುತೆರೆ, ರಿಯಾಲಿಟಿ ಶೋ, ರಾಜಕಾರಣ ಕ್ಷೇತ್ರಗಳಲ್ಲಿ ಬಹುಮುಖಿಯಾಗಿ ತೊಡಗಿಸಿಕೊಂಡಿದ್ದಾರೆ.

### ಆಗ ಅಭಿನಯ, ಈಗ ಸಹಜತೆ

'ಮುಖ್ಯಮಂತ್ರಿ'ಯ ಮೊದಲ ಶೋ ಮಾಡುವಾಗ 26ರ ಹರೆಯದ ಚಂದ್ರು ತಮ್ಮ ಕಪ್ಪುಕೂದಲಿಗೆ ಬಿಳಿ ಬಣ್ಣ ಹಚ್ಚಿಕೊಳ್ಳುತ್ತಿದ್ದರಂತೆ. ಚಂದ್ರುವಿನಿಂದ ಹೊರಬಂದು 'ಮುಖ್ಯಮಂತ್ರಿ' ಪಾತ್ರದೊಳಗೆ ಲೀನವಾಗುತ್ತಿದ್ದರು. ಈಗ ಮುಖ್ಯಮಂತ್ರಿಯಷ್ಟೇ ವಯಸ್ಸಾಗಿರುವ ಅವರಿಗೆ ಆ ಪಾತ್ರದ ಸಹಜತೆಯೂ ಸಿದ್ಧಿಸಿದೆ. ರಾಜ್ಯದ 15 ಮುಖ್ಯಮಂತ್ರಿಗಳ ಜತೆಗಿನ ಒಡನಾಟ, ಅವರ ವರ್ತನೆಗಳು, ರಾಜಕಾರಣದ ಪಟ್ಟುಗಳ ಅಂತರಂಗ–ಬಹಿರಂಗವನ್ನು ಚೆನ್ನಾಗಿ ಅರಿತಿರುವ ಚಂದ್ರು ಅವರು, ಅವುಗಳನ್ನು ಅಷ್ಟೇ ಲೀಲಾಜಾಲವಾಗಿಯೂ ಸಹಜವಾಗಿಯೂ ನಾಟಕದಲ್ಲಿ ತರುತ್ತಾರೆ. ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಸದಾನಂದ ಗೌಡ, ಜಗದೀಶ ಶೆಟ್ಟರ್, ಬಿ.ಎಸ್. ಯಡಿಯೂರಪ್ಪ, ಎಸ್. ಬಂಗಾರಪ್ಪ, ಸಿದ್ದರಾಮಯ್ಯ, ಎಚ್.ಡಿ. ಕುಮಾರಸ್ವಾಮಿ... ಹೀಗೆ ಬಹುತೇಕರ ವ್ಯಕ್ತಿತ್ವದ ಮಿಸಳ್‌ಭಾಜಿ ಈ ನಾಟಕದ ವಿಶೇಷತೆ.

### ಸವಾಲೊಡ್ಡಿದ್ದ 'ಮುಖ್ಯಮಂತ್ರಿ'



ಡಾ. ಬಿ.ವಿ. ರಾಜಾರಾಂ ಚಿತ್ರ

80ರ ದಶಕ ಅನೇಕ ರಂಗತಂಡಗಳು ಕ್ರಿಯಾಶೀಲವಾಗಿದ್ದವು. ಆಗಿನ್ನೂ ನಾಟಕದ ಡಿಪ್ಲೊಮಾ ಮುಗಿಸಿದ್ದ ನಾವು 'ಮುಖ್ಯಮಂತ್ರಿ' ನಾಟಕವನ್ನು ರಂಗಕ್ಕೆ ತರಬೇಕೆಂಬ ಹುಚ್ಚುಸಾಹಸಕ್ಕೆ ಬಿದ್ದಿದ್ದೆವು. ಯಾವ ಹಿನ್ನೆಲೆಯೂ ಇಲ್ಲದ 'ಕಲಾ ಗಂಗೋತ್ರಿ' ತಂಡದ ಮೇಲೆ ಎಲ್ಲರ ಗಮನ ಕೇಂದ್ರೀಕೃತವಾಗಿತ್ತು. ನಾಟಕ ಪ್ರದರ್ಶನದ ವೇಳೆಗೆ ಟಿ.ಎಸ್ ಲೋಹಿತಾಶ್ವ ಅವರಿಗೆ ಜ್ವರ. ಶೋ ಘೋಷಣೆ ಆಗಿದೆ. 82 ಪುಟಗಳಷ್ಟು ಸುದೀರ್ಘ ಸಂಭಾಷಣೆ, 20 ಪಾತ್ರಗಳೊಂದಿಗೆ ಸಂವಹನ... ಹೀಗೆ 'ಮುಖ್ಯಮಂತ್ರಿ' ನಮಗೆ ಸವಾಲೊಡ್ಡಿತ್ತು. ಚಂದ್ರು ಅವರನ್ನು ಒಪ್ಪಿಸಿ 'ಮುಖ್ಯಮಂತ್ರಿ' ಮಾಡಿದೆವು. ಮೊದಲ ಪ್ರದರ್ಶನವೇ ಹಿಟ್ ಆಗಿಬಿಟ್ಟಿತ್ತು ಎಂದು ನೆನಪಿಸಿಕೊಳ್ಳುತ್ತಾರೆ ನಾಟಕದ ನಿರ್ದೇಶಕ ಡಾ.ಬಿ.ವಿ. ರಾಜಾರಾಂ.

'ಅಲ್ಲಿಂದ ಇಲ್ಲಿಯ ತನಕ 'ಮುಖ್ಯಮಂತ್ರಿ' ನಿಂತಿಲ್ಲ. ಈ ನಿರಂತರ 43 ವರ್ಷಗಳ ಪಯಣದಲ್ಲಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೇ ನೂರಾರು ಕಲಾವಿದರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಒಂದು ವರ್ಷವೂ ನಿಲ್ಲಿಸದೇ ಈ ನಾಟಕ ಮಾಡಿದ್ದೇವೆ. ಎಲ್ಲ ಶೋ ಹೌಸ್‌ಫುಲ್! ಅನೇಕರ ಸಹಾಯಾರ್ಥವಾಗಿ ಬಹಳಷ್ಟು ಶೋಗಳನ್ನು ಮಾಡಿದ್ದೇವೆ.

ಲೋಹಿತಾಶ್ವ ಮೂಲತಃ ಇಂಗ್ಲಿಷ್ ಮೇಷ್ಟ್ರು. ಅವರು ಕನ್ನಡದಲ್ಲಿ ಅದ್ಭುತವಾಗಿ ಈ ನಾಟಕ ಕಟ್ಟಿಕೊಟ್ಟರು. ಹಿಂದೆ ಮೂರೂವರೆ ತಾಸುಗಳ ಕಾಲ ಈ ನಾಟಕ ಮಾಡುತ್ತಿದ್ದೆವು. ಬದಲಾದ ಕಾಲಘಟ್ಟದಲ್ಲಿ ನಾಟಕವನ್ನು 2 ತಾಸುಗಳಿಗೆ ಇಳಿಸಿದ್ದೇವೆ' ಎನ್ನುತ್ತಾರೆ ರಾಜಾರಾಂ.



### ಅರಸು ಉಡುಗೆ ಸ್ಫೂರ್ತಿ

ನಿಮ್ಮ ಪಾತ್ರಕ್ಕೆ ರೋಲ್ ಮಾಡೆಲ್ ಯಾರು ಅಂತ 'ಮುಖ್ಯಮಂತ್ರಿ' ಚಂದ್ರು ಅವರನ್ನು ಪ್ರಶ್ನಿಸಿದರೆ, 'ಆಗಿನ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ, ಡಿ. ದೇವರಾಜ ಅರಸು ಮಾದರಿಯಾಗಿದ್ದರು. ಪ್ರಧಾನಿಗಳಲ್ಲಿ ಮನಮೋಹನ ಸಿಂಗ್, ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಿದ್ದರು. ಆದರೆ ಈಗ ಯಾರೂ ಇಲ್ಲ' ಎಂದು ಉತ್ತರಿಸುತ್ತಾರೆ ಚಂದ್ರು.

'ಅರಸು ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಘನತೆ ತಂದುಕೊಟ್ಟವರು. ಅವರಿಗೊಂದು ಗತ್ತು ಇತ್ತು. ಅವರು ತಮ್ಮ ಕೈಬೆರಳಲ್ಲಿ ಒಂದು ಉಂಗುರ ಬಿಟ್ಟರೆ ಬೇರೆ ಆಭರಣ ಧರಿಸುತ್ತಿರಲಿಲ್ಲ. ಅವರು ಉಡುತ್ತಿದ್ದ ಕಚ್ಚೆ ಪಂಚೆ, ಉದ್ದನೆಯ ಜುಬ್ಬಾ ಅವರ ಎತ್ತರದ ವ್ಯಕ್ತಿತ್ವಕ್ಕೆ ಶೋಭೆ ನೀಡುತ್ತಿತ್ತು. ಹಾಗಾಗಿ ಅವರ ಉಡುಗೆಯನ್ನೇ 'ಮುಖ್ಯಮಂತ್ರಿ' ಪಾತ್ರಕ್ಕೆ ಅನುಕರಣೆ ಮಾಡಿದೆ. ಆದರೆ 'ಮುಖ್ಯಮಂತ್ರಿ' ಪಾತ್ರ ಆಯಾ ಕಾಲಘಟ್ಟದ ರಾಜಕೀಯ ವಿದ್ಯಮಾನಕ್ಕೆ ತಕ್ಕಂತೆ ಮೌಲ್ಡ್ ಆಗಿದೆ' ಎನ್ನುತ್ತಾರೆ ಅವರು.

### ವಿದೇಶದಲ್ಲೂ ದರ್ಬಾರ್

ಕನ್ನಡ, ಭಾರತದ ನೆಲವಷ್ಟೇ ಅಲ್ಲ, 'ಮುಖ್ಯಮಂತ್ರಿ' ನಾಟಕ ವಿದೇಶಗಳಲ್ಲೂ ಪ್ರದರ್ಶನಗೊಂಡಿದೆ. ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಸಿಂಗಪುರ, ಮಲೇಷ್ಯಾಗಳಲ್ಲಿ ಅನೇಕ ಪ್ರದರ್ಶನಗಳನ್ನು ಕಂಡಿದೆ. ಆರ್. ಗುಂಡೂರಾವ್, ರಾಮಕೃಷ್ಣ ಹೆಗಡೆ, ಎಸ್. ಆರ್. ಬೊಮ್ಮಾಯಿ, ಎಚ್.ಡಿ. ದೇವೇಗೌಡ, ವೀರಪ್ಪ ಮೊಯಿಲಿ, ಎಸ್. ಬಂಗಾರಪ್ಪ, ಎಸ್. ಎಂ. ಕೃಷ್ಣ, ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಡಿ.ವಿ. ಸದಾನಂದ ಗೌಡ ಹೀಗೆ ಅನೇಕ ಮುಖ್ಯಮಂತ್ರಿಗಳು, ರಾಜಕಾರಣಿಗಳು ಈ ನಾಟಕ ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಜನವರಿ 22ರಂದು ಸಂಜೆ 6ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಮುಖ್ಯಮಂತ್ರಿ' ನಾಟಕ 800ನೇ ಪ್ರದರ್ಶನ ಕಾಣುತ್ತಿದೆ. 'ಮುಖ್ಯಮಂತ್ರಿ'ಯಾಗಿ ಚಂದ್ರು ಪ್ರೇಕ್ಷಕರನ್ನು ಎದುರುಗೊಳ್ಳಲಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in